Construction of Janaga bridge in Haliyal taluk.

666. SRI V. M. GHADI (Haliyal) .—Will the Minister for Public Works be pleased to state :—

(*a*) whether the work of construction of Janaga Bridge in Haliyal Taluk, N. K. District has been taken up ;

(*b*) whether the plans and estimate of this bridge have been revised ;

(*c*) when the work is going to be completed ;

(*d*) the reasons for delay ;

(*e*) whether the Government intends to take necessary action against the persons who are responsible for the delay ?

SRI H. M CHANNABASAPPA (Minister for Public Works) .—

(*a*) Yes.

(*b*) No.

(*c*) By 30th June 1977.

(*d*) Slow progress by the Contractor ;

(*e*) Yes.

SRI V. M. GHADI —In what year the construction of this project has been taken up and what is the estimated cost ?

† SRI H. M. CHANNABASAPPA .—The estimated cost is about Rs 4.1 lakhs. Construction was commenced on 28-2-1973

SRI V. M. GHADI —As per your schedule, in what year the work was given to the contractor ?

SRI H. M. CHANNABASAPPA .—Work has not been going on as per schedule.

ಶ್ರೀ ವಿ. ಎಂ. ಘಾಡಿ .—ತಮ್ಮ ಉತ್ತರದ ಪ್ರಕಾರ ೩೦-೬-೧೯೭೭ ರ ಹೊತ್ತಿಗೆ ಈ ಕಾಮಗಾರಿ ಪೂರ್ತಿಗೊಳಿಸಲಾಗುವುದು ಅಂತ ಇದೆ. ಈ ಕೆಲಸ ಡಿಲೇ ಆಗುವುದಕ್ಕೆ ಕಂಟ್ರಾಕ್ಟರೇ ಕಾರಣ ಎಂದು ಹೇಳುತ್ತಾರೆ. ಕಂಟ್ರಾಕ್ಟರ್ ಏನು ಹೇಳುತ್ತಿದ್ದಾರೆ ಎಂದರೆ ಸರ್ಕಾರದವರು ಬಿಲ್ ಕೊಡುತ್ತಿರಲಿಲ್ಲ ಆದುದರಿಂದ ಈ ಕೆಲಸ ಪೂರ್ತಿಯಾಗುವುದಿಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದಾನೆ. May I know whether this is a fact ? If it is not, what action is the Government taking against this contractor ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಕಂಟ್ರಾಕ್ಟ್‌ದಾರನು ಈ ರೀತಿ ಹೇಳುತ್ತಾನೆ ಅನ್ನತಕ್ಕಂಥಾ ಆಧಾರದ ಮೇಲೆ ನೀವು ಹೇಳಿದ್ದನ್ನು ತೀರ್ಮಾನ ಮಾಡುವುದಾಕ್ಕಾಗುವುದಿಲ್ಲ. ಕಂಟ್ರಾಕ್ಟ್‌ದಾರನಿಗೆ ಹಣದ ಶಕ್ತಿ ಕಡಿಮೆ ಎನ್ನುವುದಕ್ಕೆ ನನಗೆ ರಿಪೋರ್ಟ್ ಬಂದಿದೆ.

Central Tribal Ashram School at Nellurapala.

703. SRI G. K. SUBBAIAH (Virajpet) .—Will the Minister for Rural Development and Social Welfare be pleased to state :—

(*a*) the strength of the Staff of Central Tribal Ashram School at Nellurapala and the strenght of Women's Welfare Centre in Hunsur Taluk ;

(*b*) the staffing pattern of the above Institutions may be furnished ;

(*c*) of them, how many are Scheduled Tribes ?

SRI N. RACHIAH (Minister for Rural Development and Social Welfar) .—

(*a*) Ashram School, Nellurapala .— 9
Women Welfare Centre .— 18

(*b*) Ashram School, Nellurpala .—

(1) Principal	...	One
(2) Agricultural Teacher	...	One
(3) Teachers	...	Two
(4) Bullockman	...	One
(5) Cooks	...	Two
(6) Kitchen Servants	...	Two

Women Welfare Center .—

(1) Women Welfare Organiser	...	1
(2) Conductress	...	1

(*c*) Ashram School .—No Scheduled Tribes staff.
Women Welfar Centre .— Scheduled Tribe .—One

ಶ್ರಿ ಜಿ.ಕೆ. ಸುಬ್ಬಯ್ಯ.— ಸ್ವಾಮಿ, ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ನೆಲ್ಲೂರು ಪಾಳ್ಯದಲ್ಲಿ ಕೇಂದ್ರ ಬುಡಕಟ್ಟು ಆಶ್ರಮ ಶಾಲೆಯಲ್ಲಿ ಅನುಸೂಚಿತ ಆದಿಮ ಜಾತಿ ಸಿಬ್ಬಂದಿ ವರ್ಗದವರು ಒಬ್ಬರೂ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಕಾರಣ ಏನು ಸ್ವಾಮಿ?

† ಶ್ರೀ ಎನ್. ರಾಚಯ್ಯ.— ಅಲ್ಲಿ ಈ ಅನುಸೂಚಿತ ಆದಿಮ ಜಾತಿಯವರು ಸಿಗದೇ ಇರತಕ್ಕಂಥಾದ್ದೇ ಕಾರಣ. ಇನ್ನು ಮುಂದೆ ಈ ಬಗ್ಗೆ ನೇಮಕ ಮಾಡುವಾಗ ಹೆಚ್ಚಾಗಿ ಈ ಅನುಸೂಚಿತ ಆದಿಮ ಜಾತಿಯವರನ್ನೇ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಜಿ. ಕೆ. ಸುಬ್ಬಯ್ಯ.— ಈ ಅನುಸೂಚಿತ ಆದಿಮ ಜಾತಿ ಸಿಬ್ಬಂದಿ ವರ್ಗದವರನು ನೇಮಕ ಮಾಡುವ ಅಧಿಕಾರ ಯಾರಿಗೆ ಕೊಟ್ಟಿದ್ದೀರಿ ?

ಶ್ರೀ ಎನ್. ರಾಚಯ್ಯ.— ಇವರನ್ನು ನೇಮಕ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳು ಮತ್ತು ಡೈರಕ್ಟರುಗಳಿಗೆ ಇದೆ. ಇವರು ಮಾಡುತ್ತಾರೆ. ಬೇರೆ ಅಧಿಕಾರಿಗಳಿಗೆ ಇವರನ್ನು ನೇಮಕ ಮಾಡುವ ಅಧಿಕಾರ ಇಲ್ಲ. ಆದರೆ ನಾಲ್ಕನೇ ದರ್ಜೆ ನೌಕರರನ್ನು ನೇಮಕ ಮಾಡಬೇಕಾದರೆ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಕ್ಲಾಸ್ ಎರಡನೇ ದರ್ಜೆಯವರು ಅವರನ್ನು ನೇಮಕ ಮಾಡುತ್ತಾರೆ.

ಶ್ರೀ ಜಿ.ಕೆ. ಸುಬ್ಬಯ್ಯ.— ಇನ್ನು ಮುಂದೆ ಈ ರೀತಿ ಅನ್ಯಾಯವಾಗದಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಹೆಚ್.ಎಂ. ಚೆನ್ನಬಸಪ್ಪ.— ಹರಿಜನ-ಗಿರಿಜನರಿಗೆ ಪ್ರಾತಿನಿಧ್ಯ 1950ನೇ ಇಸವಿಯಿಂದಲೂ ಸಾಕಷ್ಟು ಸಿಗುವುದಿಲ್ಲ ಅನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆ ಅನ್ಯಾಯಗಳನ್ನು ಸರಿಪಡಿಸಬೇಕೆನ್ನುವುದೇ ಸರ್ಕಾರದ ಸಂಕಲ್ಪ.